# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 15.07.2011**

## *ಮಹದೇವಪುರ ವಲಯದಲ್ಲಿ ಬಾಕಿ ಆಸ್ತಿ ತೆರಿಗೆದಾರರಿಂದ ದಾಖಲೆ ವಸೂಲಾತಿ*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಹದೇವಪುರ ವಲಯದಲ್ಲಿ 2010-11 ನೇ ಸಾಲಿನಲ್ಲಿ 85 ಕೋಟಿ ಗುರಿ ನಿಗಧಿಪಡಿಸಿಕೊಂಡು 158 ಕೋಟಿ ಆಸ್ತಿ ತೆರಿಗೆ ವಸೂಲಿ ಮಾಡಲಾಗಿರುತ್ತದೆ. 2011-12ನೇ ಸಾಲಿನಲ್ಲಿ 214.35 ಕೋಟಿ ಗುರಿ ನಿಗಧಿಪಡಿಸಲಾಗಿದ್ದು, ಪರಿಣಾಮಕಾರಿಯಾಗಿ ಆಸ್ತಿ ತೆರಿಗೆ ವಸೂಲಿ ಕಾರ್ಯವನ್ನು ನಿರ್ವಹಿಸಲು ಮಾನ್ಯ ಆಯುಕ್ತರವರ ಸೂಚನೆಗಳಂತೆ ಹೆಚ್ಚಿನ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ (Defaulters) ಪ್ರಕರಣಗಳನ್ನು ಗುರುತಿಸಿ, ಒಂದು ಲಕ್ಷಕ್ಕೂ ಮೇಲ್ಪಟ್ಟು ಮತ್ತು ಎರಡು ಲಕ್ಷ ಮೇಲ್ಪಟ್ಟು ತೆರಿಗೆ ಬಾಕಿದಾರರುಗಳ ಪಟ್ಟಿ ಮಾಡಿ ಡಿಮ್ಯಾಂಡ್ ನೋಟೀಸ್, ಷೋಕಾಸ್ ನೋಟೀಸ್‌ಗಳನ್ನು ನೀಡಿ, ಹೆಚ್ಚಿನ ಮೊತ್ತದ ತೆರಿಗೆ ಉಳಿಸಿಕೊಂಡಿರುವ ಬಾಕಿದಾರರನ್ನು ಸಂಪರ್ಕಿಸಲು ತಂಡಗಳನ್ನು ರಚಿಸಿ ವಲಯ ಜಂಟಿ ಆಯುಕ್ತರು, ಉಪ ಆಯುಕ್ತರು, ಕಂದಾಯ ಅಧಿಕಾರಿಗಳು, ರವರ ನೇತೃತ್ವದಲ್ಲಿ ಬಾಕಿ ತೆರಿಗೆ ವಸೂಲಿ ಕಾರ್ಯ ಕೈಗೊಳ್ಳಲಾಗಿದೆ.

ಪ್ರಥಮ ಹಂತದಲ್ಲಿ ವಲಯದಲ್ಲಿ 1-00 ಲಕ್ಷಕ್ಕೂ ಮೇಲ್ಪಟ್ಟ 36 ಆಸ್ತಿಗಳು ಹಾಗೂ 2-00 ಲಕ್ಷಕ್ಕೂ ಮೇಲ್ಪಟ್ಟ 144 ಪ್ರಕರಣಗಳನ್ನು ಪಟ್ಟಿ ಮಾಡಿ ನಿಯಮಾನುಸಾರ ಡಿಮ್ಯಾಂಡ್ ನೋಟೀಸ್, ಷೋಕಾಸ್ ನೋಟೀಸ್ ಜಾರಿ ಮಾಡಲಾಗಿರುತ್ತೆ.

ಇಂತಹ ಆಸ್ತಿಗಳ ಪೈಕಿ ಅತಿ ಹೆಚ್ಚು ಬಾಕಿ ಉಳಿಸಿಕೊಂಡಿದ್ದ ಮೆ|| ಗಾಲ್ಫ್ ಲಿಂಕ್ಸ್ ಪ್ರೈ.ಲಿ ರವರಿಂದ 8.00 ಕೋಟಿ ಹಾಗೂ ಮೆ|| ಭಾಗಮನೆ ವರ್ಲ್ಡ್ ಟೆಕ್ನಾಲಜಿ ಸೆಂಟರ್ ಸಂಸ್ಥೆಯವರಿಂದ ರೂ.1.58 ಕೋಟಿ ಮತ್ತು ಇತರೆ ಬಾಕಿದಾರರಿಂದ ರೂ.2.86 ಕೋಟಿ ಒಟ್ಟು 12.44 ಕೋಟಿ ಬಾಕಿ ಆಸ್ತಿತೆರಿಗೆಯನ್ನು ಜೂನ್-2011 ರಲ್ಲಿ ವಸೂಲಿ ಮಾಡಲಾಗಿರುತ್ತೆ.

ವಸತಿಯೇತರ (Commercial) ಕಟ್ಟಡಗಳ ಮಾಲಿಕರು ಎಸ್.ಎ.ಎಸ್ ಅಡಿಯಲ್ಲಿ ತೆರಿಗೆ ಪಾವತಿಸಿರುವ ಹಲವಾರು ಪ್ರಕರಣಗಳನ್ನು ಮರುಪರಿಶೀಲಸಿ, ತೆರಿಗೆ ಪರಿಷ್ಕರಿಸಲು ಕ್ರಮ ವಹಿಸಲಾಗಿದೆ. ಉದ್ದಿಮೆಗಳು ಹಾಗೂ ಹೋಟೆಲ್ ಮತ್ತು ಇತರೆ ಸಂಸ್ಥೆಗಳವರು 2-3 ವರ್ಷಗಳಿಂದ ಆಸ್ತಿ ತೆರಿಗೆ ಪಾವತಿಸದೆ ಇರುವುದನ್ನು ಗುರುತಿಸಿ ಮಾಲಿಕರುಗಳಿಗೆ ತೀವ್ರತರ ಎಚ್ಚರಿಕೆ ನೋಟೀಸ್‌ಗಳನ್ನು ಜಾರಿ ಮಾಡಲಾಗಿದೆ. ಕೆಲವು ಹೋಟೆಲ್‌ಗಳ ಪರವಾನಿಗೆ ರದ್ದುಪಡಿಸಿ ಬೀಗ ಮುದ್ರೆ ಹಾಕಲು ಸಹ ವಲಯದಲ್ಲಿ ಕ್ರಮ ವಹಿಸಲಾಗಿದೆ.

ಹತ್ತು ಸಾವಿರಕ್ಕೂ ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳನ್ನು ಸಹ ಪಟ್ಟಿ ಮಾಡಿದ್ದು, ಅವರಿಗೆ ಡಿಮ್ಯಾಂಡ್ ನೋಟೀಸ್, ಷೋಕಾಸ್ ನೋಟೀಸ್ ಜಾರಿ ಮಾಡಲಾಗುತ್ತಿದ್ದು, ಮುಂಬರುವ ದಿನಗಳಲ್ಲಿ ಬಾಕಿ ಉಳಿಸಿಕೊಂಡಿರುವ ಎಲ್ಲಾ ಆಸ್ತಿಗಳಿಂದ ತೆರಿಗೆ ವಸೂಲಿ ಮಾಡಲು ಕ್ರಮ ವಹಿಸಲಾಗುತ್ತದೆಂದು ಮಹದೇವಪುರ ವಲಯದ ಜಂಟಿ ಆಯುಕ್ತರಾದ ಶ್ರೀ ಕೆ.ಎನ್. ದೇವರಾಜು ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**